**<u>ದಿನಾಂಕ:11.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ವಾದಿಪರ ಶ್ರೀ: ಎಂ.ಎಸ್. ಬಿ ವಕೀಲರಿಂದ:-</u>**

ನಾನು 10 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು house keeping ಕೆಲಸ ಮಾಡುತ್ತೇನೆ. ನಾನು ಸಿ.ಆರ್.ಎಂ.ಐ.ಟಿ ಯಲ್ಲಿ house keeping ಆಗಿ ಕೆಲಸ ಮಾಡುತ್ತಿದ್ದೇನೆ. ಈಗ 6 ತಿಂಗಳಿಂದ ಕೆಲಸ ಮಾಡುತ್ತಿದ್ದೇನೆ. ಅದಕ್ಕು ಮೊದಲು ಆಸ್ಪತ್ರೆಯಲ್ಲಿ house keeping ಕೆಲಸ ಮಾಡುತ್ತಿದ್ದೆನು. ಕಾಮಾಕ್ಷಿ ಪಾಳ್ಯದಲ್ಲಿ ನನ್ನ ಮಾವ ಪ್ರಾವಿಜನ್ ಸ್ಟೋರ್ ಇಟ್ಟುಕೊಟ್ಟಿದ್ದರು. ಅದು ಯಾರು ಸಹಾಯಕರು ಇಲ್ಲದೇ ಇದ್ದ ಕಾರಣಕ್ಕಾಗಿ, ನನ್ನ ಮಾವ ತೀರಿಕೊಂಡಿದ್ದರಿಂದ, ಅತ್ತೆ ಅವರಿಗಿಂತ ಮುಂಚೇ ತೀರಿಕೊಂಡ ಕಾರಣಕ್ಕಾಗಿ, ಗಂಡ ಮನೆಯಿಂದ ಹೊರಗೆ ಹೋದವರು ವಾಪಸ್ಸುಬರಲಿಲ್ಲ, ಆದ್ದರಿಂದ 2014 ರಲ್ಲಿ ಅದನ್ನು ಮುಚ್ಚಿದ್ದೇನೆ ಎಂದು ಹೇಳುತ್ತಾರೆ. ನಾನು ಬಿ.ಟಿ.ಎಂ ಲೇಔಟ್ ನಲ್ಲಿ ವಾಸವಿದ್ದೇನೆ. ನನ್ನ ಮನೆಯ ವಿಳಾಸ ಮನೆ ನಂ. 440, 2 ನೇ ಮುಖ್ಯ ರಸ್ತೆ, 2 ನೇ ಅಡ್ಡ ರಸ್ತೆ, ಬಿ.ಟಿ.ಎಂ ಲೇಔಟ್, ಬೆಂಗಳೂರು. ನಾನು ವಾಸವಿರುವಂತ ಮನೆಯ ಸ್ವತ್ತು ನನ್ನ ಮಾವ ಹನುಮಂತಯ್ಯ ಇವರಿಗೆ ಸೇರಿದ್ದು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಮಾವ ನನಗೆ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಆ ಸ್ವತ್ತಿನಲ್ಲಿ ನೆಲ ಹಂತಸ್ತು,

1ನೇ ಮತ್ತು 2ನೇ ಹಂತಸ್ತು ಇದೆ ಎಂದು ಹೇಳುತ್ತಾರೆ. ನಾನು ವಾಸ ಮಾಡುತ್ತಿರುವುದು 3ನೇ ಹಂತಸ್ತಿನ ಚಿಕ್ಕ ಕೊಟ್ಟಡಿಯಲ್ಲಿ ವಾಸಮಾಡುತ್ತಿದ್ದೇನೆ ಎಂದು ಹೇಳುತ್ತಾರೆ. ನೆಲ ಮಹಡಿ, 1ನೇ ಮತ್ತು 2ನೇ ಮಹಡಿಯಲ್ಲಿ ಬಾಡಿಗೆ ದಾರರು ಇದ್ದಾರೆ. ನೆಲ ಮಹಡಿಯಲ್ಲಿ ಇರುವಂತಹ ಬಾಡಿಗೆದಾರರ ಹೆಸರು ಗಂಗಾಧರ ಮತ್ತು ಅವರ ಕುಟುಂಬದವರು. 1ನೇ ಮಹಡಿಯಲ್ಲಿ ಇರುವಂತಹ ಬಾಡಿಗೆದಾರರ ಹೆಸರು ಸುವರ್ಣಮ್ಮ ಮತ್ತು ಅವರ ಕುಟುಂಬದವರು. 2ನೇ ಮಹಡಿಯಲ್ಲಿ ಇರುವಂತಹ ಬಾಡಿಗೆದಾರರ ಹೆಸರು ಸುನಿತಾ ಮತ್ತು ಅವರ ಕುಟುಂಬದವರು. ನಾನು 3ನೇ ಹಂತಸ್ತಿನ ಸ್ವಾಧೀನಕ್ಕೆ ಹೋಗಿದ್ದು 2014 ರಲ್ಲಿ. ನಾನು ಅಲ್ಲಿಗೆ ಹೋಗುವುದಕ್ಕಿಂತ ಮೊದಲೇ ಮೇಲೆ ಹೇಳಿದ ಬಾಡಿಗೆದಾರರು ಮೂರು ಹಂತಸ್ತಿನ ಮನೆಯಲ್ಲಿಯು ಬಾಡಿಗೆಗೆ ಇದ್ದರು ಎಂದು ಹೇಳುತ್ತಾರೆ.

ನನ್ನ ಮಾವ ಹನುಮಂತಯ್ಯ ಇವರು ದಿ:12.12.2012 ರಂದು ತೀರಿಕೊಂಡರು ಎಂದರೆ ಸರಿ. ಈ ಬಾಡಿಗೆದಾರರು ನನ್ನ ಮಾವ ತೀರಕೊಳ್ಳುವ ಮುಂಚೆಯೇ ಅಲ್ಲಿ ಬಾಡಿಗೆದಾರರಾಗಿದ್ದರು. ನನ್ನ ಮಾವನಿಗು ಮತ್ತು ಮೇಲೆ ಹೇಳಿದ ಮೂರು ಹಂತಸ್ತಿನ ಬಾಡಿಗೆದಾರರಿಗೆ ಬಾಡಿಗೆ ಕರಾರು ಪತ್ರವಾಗಿರುತ್ತದೆ. ಆ ಕಾರಾರು ಪತ್ರ ಈಗ ಬಾಡಿಗೆದಾರರ ಬಳಿ ಇದೆ. ನನ್ನ ಮಾವ ಆ ಬಾಡಿಗೆ ಕರಾರುಗಳ ನಕಲುಗಳನ್ನು ತೆಗೆದು ಇಟ್ಟಿಕೊಂಡಿದ್ದರು. ನನ್ನ ಮಾವ ತೀರಿಕೊಂಡ

ಈಗಲು ಮೇಲೆ ಹೇಳಿದ ಮೂರು ಹಂತಸ್ತಿನ ಮನೆಗಳಿಗೆ ನನ್ನ ಮಾವನ ಹೆಸರಿನಲ್ಲಿಯೇ ಬಾಡಿಗೆ ಕರಾರು ಪತ್ರ ಮುಂದುವರೆಯುತ್ತಿದೆ ಎಂದು ಹೇಳುತ್ತಾರೆ. ಆ ಬಾಡಿಗೆದಾರರು ಈಗ ಯಾರಿಗು ಬಾಡಿಗೆ ನೀಡುತ್ತಿಲ್ಲ. ಅವರು ನ್ಯಾಯಾಲಯಕ್ಕೆ ಕಟ್ಟುತ್ತಿದ್ದಾರೆ. ನನ್ನ ಮಾವ ಮೃತರಾದ ನಂತರ ಬಾಡಿಗೆದಾರರಿಗೆ ಬಾಡಿಗೆ ನೀಡುವಂತೆ ಲಿಖಿತವಾಗಿ ನೋಟಿಸ್ ಕೊಟ್ಟಿಲ್ಲ. 2014 ಕ್ಕಿಂತ ಮುಂಚೆ ನಾನು ಕಾಮಾಕ್ಷಿಪಾಳ್ಯದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನು. ಆ ಬಾಡಿಗೆಯನ್ನು ನಾನೇ ಕಟ್ಟುತ್ತಿದ್ದೇನು. ನಾನು ಪ್ರಾವಿಜನ್ ಸ್ಟೋರ್ ನಿಂದ ಬಂದ ವರಮಾನದಿಂದ ಬಾಡಿಗೆಯನ್ನು ಕಾಮಾಕ್ಷಿಪಾಳ್ಯದ ಮನೆಗೆ ಕಟ್ಟುತ್ತಿದ್ದೇನು. ಹನುಮಂತಯ್ಯ ಇವರು ನಾನು ಬಾಡಿಗೆಗೆ ಇದ್ದ ಮನೆಯಲ್ಲಿ ತೀರಿಕೊಂಡಿರುತ್ತಾರೆ. ಹನುಮಂತಯ್ಯ ಇವರು 2010 ರಿಂದ ಅವರು ಸಾಯುವವರೆಗು ನಮ್ಮ ಜೊತೆಯಲ್ಲಿಯೇ ವಾಸವಿದ್ದರು. ನನ್ನ ಗಂಡ ಮತ್ತು ಮಾವ ವಿಶ್ವಾಸವಾಗಿದ್ದರು.

ನಾನು ಮತ್ತು ನನ್ನ ಗಂಡ ಅನ್ಯೂನ್ಯತೆಯಿಂದ ಇದ್ದೇವು. ದಿಃ 11.11.2011 ರಂದು ನನ್ನ ಗಂಡ ನಾಪತ್ತೆಯಾಗಿದ್ದಾರೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿರುವುದು ಸರಿ ಇದೆ. ದಿನನಿತ್ಯ ಮನೆಯಿಂದ ಹೊರಗೆ ದೂಮಪಾನ ಮಾಡಲು ಹೋಗುತ್ತಿದ್ದರು, ಆಗೆಯೇ ದೂಮಪಾನ ಮಾಡಲು ಹೊರಗೆ ಹೋದವರು ಮನಗೆ ಬರಲಿಲ್ಲ ಎಂದು ಹೇಳುತ್ತಾರೆ. ಇಲ್ಲಿಯವರೆಗು ಅವರು ಮನೆಗೆ ಬಂದಿಲ್ಲ ಎಂದು

ಹೇಳುತ್ತಾರೆ. ದಿಃ 31.08.2011 ರಂದು ನನ್ನ ಗಂಡ ಕಾಮಾಕ್ಷಿಪಾಳ್ಯದ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು ಎಂದರೆ ಸರಿ. ನಾನು ನನ್ನ ಗಂಡನ ಮೇಲೆ ಅಲ್ಲೆ ಮಾಡಿ ಕೊಲೆ ಮಾಡಲು ಪ್ರಯತ್ನಿಸಿದೆ ಎಂದು ಆಪಾದನೆ ಮಾಡಿ ದೂರು ನೀಡಿದ್ದರು ಎಂದರೆ ಸರಿ. ಈ ದೂರಿನ ವಿಚಾರವಾಗಿ ಪೊಲೀಸ್ ನವರು ನನನ್ನು ಕರೆದು ವಿಚಾರಣೆ ಮಾಡಿದ್ದಾರೆ. ನಾನು ಪೊಲೀಸರಿಗೆ ಲಿಖಿತವಾಗಿ ಮುಚ್ಚಳಿಕೆ ಬರೆದುಕೊಟ್ಟದ್ದೇನೆ. ನನನ್ನು ಎದರಿಸಲು ನನ್ನ ಗಂಡ ಸುಳ್ಳು ದೂರು ಕೊಟ್ಟಿದ್ದಾರೆ ಎಂದು ನಾನು ಲಿಖಿತ ಹೇಳಿಕೆಯಲ್ಲಿ ಬರೆದುಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನನ್ನ ಗಂಡ ಮತ್ತು ಮಾವ ಅವರ ಮುಚ್ಚಳಿಕೆಯಲ್ಲಿ ತಾವು ನನನ್ನು ಎದುರಿಸಲು ಈ ರೀತಿ ಸುಳ್ಳು ದೂರು ಕೊಟ್ಟಿದ್ದೇವೆ ಎಂದು ಅವರು ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನನ್ನ ಗಂಡ ನನ್ನ ಜೊತೆಯಲ್ಲಿ ಚೆನ್ನಾಗಿ ಇದ್ದರು, ನನ್ನ ಮಾವ ನನ್ನ ಜೊತೆಯಲ್ಲಿ ಚೆನ್ನಾಗಿದ್ದರೂ ನಿನ್ನ ಮೇಲೆ ದೂರು ನೀಡಿಲು ಏನು ಕಾರಣ ಎಂದರೆ ಸಾಕ್ಷಿ ನನ್ನ ಗಂಡ ಎರಡು ಕೈ ಗಳನ್ನು ಕಳೆದುಕೊಂಡಿದ್ದ, ಮಾನಸಿಕ ಅಸ್ವಸ್ತ ಎಂದು ಗುಳಿಗೆಯನ್ನು ಸೇವಿಸುತ್ತಿದ್ದಾ, ಮಾನಸಿಕ ಅಸ್ವಸ್ತ ದಿಂದ ನನ್ನ ಜೊತೆಯಲ್ಲಿ ಆಗಾಗ ಜಗಳ ಮಾಡುತ್ತಿದ್ದಾ ಎಂದು ಹೇಳುತ್ತಾರೆ. ಈ ಜಗಳ ಆಸ್ತಿಗೆ ಸಂಭಂದಪಟ್ಟಂತ ಜಗಳವಲ್ಲ. ದಾವಾ ಆಸ್ತಿ 1 ರಲ್ಲಿ ನನ್ನ ಗಂಡನ ತಂಗಿ ಭಾಗ ಬರಬೇಕು ಎಂದು ದಾವೆ ಸಲ್ಲಿಸಿರುವ ವಿಚಾರ ನಾನು

ತಿಳಿದುಕೊಂಡಿದ್ದೇನೆ. ಈ ಆಸ್ತಿ ಅಲ್ಲದೇ ಇನ್ಯಾವ ಆಸ್ತಿಗೆ ದಾವೆ ಹಾಕಿದ್ದಾರೆ ಎಂದು ನಮ್ಮ ವಕೀಲರು ನನಗೆ ತಿಳಿಸಿದ್ದಾರೆ. ನನಗೆ ಆಂಗ್ಲ ಭಾಷೆ ಓದಲು, ಬರೆಯಲು ಬರುವುದಿಲ್ಲ.

**(ಈ ಹಂತದಲ್ಲಿ ವಾದಿಪರವಕೀಲರು ಮುಂದುವರೆದ ಪಾಟೀ ಸವಾಲಿಗೆ ಮನವಿಮಾಡಿರುತ್ತಾರೆ. ಮನವಿಯನ್ನು ಅಂಗಿಕರಿಸಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಶ್ರೀನಿವಾಸ)**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**

**ಡಿಡಬ್ಲ್ಯೂ: 1**